DOC-266
T-P-2

R N o KRNN 12

2 - 4 - 74

ರಾಜ್ಯದಲ್ಲಿ ಪ್ರಥಮ ಸ್ವರ್ಣ ಮಹೋತ್ಸವ ನೆರವೇರಿಸಿದ ಪತ್ರಿಕೆ

First Golden Jubilee Celebrated Paper in The State

** Now in 57 th Year **

'Satyavadi' daily, Mysore 4

ಸತ್ಯವಾದಿ

ಸ್ಥಾಪಕರು: ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | ಪ ಕ ಸ

# ಅಧಿಕಾರಿಗಳಿಂದ ಅಕ್ರಮ ಸಾಗಾಣಿಕೆ ಪತ್ತೆ

### ಜಯಪ್ರಕಾಶರ ನಾಯಕತ್ವ

ಪಾಟ್ನಾ— ಬೀಹಾರು ಸರಕಾರ ಜನರ ಶಾಂತಿಯುತ ಪ್ರತಿಭಟನೆ ಮತ್ತು ಕಾರ್ಯವನ್ನು ನಿರಾಕರಿಸುವ ಕಾರ್ಯವನ್ನು ನಿಲ್ಲಿಸದಿದ್ದರೆ, ತಾವು ಅನಾರೋಗ್ಯದಿಂದಿದ್ದರೂ ತಾವೇ ಶಾಂತಿ ಸೈನಿಕರ. ವಿದ್ಯಾರ್ಥಿಗಳ ಮತ್ತಿತರ ಪ್ರತಿಭಟನಾ ಮೆರವಣಿಗೆಯ ನಾಯಕತ್ವ ವಹಿಸುವುದಾಗಿ ಸರ್ವೋದಯ ನಾಯಕ ಶ್ರೀ ಜಯಪ್ರಕಾಶ ನಾರಾಯಣರು ಸರಕಾರಕ್ಕೆ ಎಚ್ಚರಿಕೆ ನೀಡಿರುವರು.

★

### ದೊಡ್ಡ ರಾಷ್ಟ್ರಕ್ಕೆ ಚಿಕ್ಕ ರಾಷ್ಟ್ರದ ನೆರವು

ನವದೆಹಲಿ— ವಿಶ್ವದ ಎರಡನೇ ಅತಿ ದೊಡ್ಡ ದೇಶವಾದ ಭಾರತಕ್ಕೆ ಯೂರೋಪಿನ ಅತಿ ಚಿಕ್ಕ ಬಡರಾಷ್ಟ್ರವಾದ ಐರ್ಲಿಂಡ್ ಗಣರಾಜ್ಯವು ಆರ್ಥಿಕ ನೆರವು ನೀಡಲಿದೆ; ಅದು ಭಾರತಕ್ಕೆ 150000 ಸ್ಟರ್ಲಿಂಗ್ (ಸುಮಾರು ರೂ 28 ಲಕ್ಷ) ಕೊಡುವುದಾಗಿ ತಿಳಿಸಿದೆ; ಇದು ನಾವು ಕೊಡತಕ್ಕದ್ದಲ್ಲ ಮತ್ತು ಇದಕ್ಕೆ ಯಾವ ಕಟ್ಟುಪಾಡಿಲ್ಲ

★

### ಬಹಿರಾಕಾಶದ ಕೆಳಗೆ ಮುನಿಸಿಪಲ್ ಕಾರ್ಪೊರೇಷನ್ ಕಚೇರಿ

ಪಾಟ್ನಾ— ಮುನಿಸಿಪಲ್ ಕಾರ್ಪೊರೇಷನ್ನಿನ ಆಫೀಸು ಬಹಿರಾಕಾಶದ ಕೆಳಗೆ ನಡೆಯುತ್ತಿದೆ – ಮಾರ್ಚಿ 18 ರಂದು ಗಲಭೆಗಳಲ್ಲಿ ಅದರ 3 ಕಟ್ಟಡಗಳು ಬೆಂಕಿಯಿಂದ ನಾಶವಾಯಿತು.

●

### ಪದವೀದಾನ ಪಥಸಂಚಲನ

ಮೈಸೂರು— ಈ ಗಿನ ಪದವೀದಾನ ಪಥಸಂಚಲನವನ್ನು ಶತಜೀವನ ವಿಷಯವನ್ನು ಪಠ್ಯಪುಸ್ತಕಗಳಲ್ಲಿ ವಿಶ್ವವಿದ್ಯಾಲಯದ ಪೆನೇಟು ಒಂದು ಸಮಿತಿ ನಿರ್ಧರಿಸಲಿದೆ

★

### ಅಪಾರ ಅವಶ್ಯಪದಾರ್ಥಗಳ ವಶ

ಅಹಮದಾಬಾದು— ರೂ. 2 24 ಕೋಟಿ ಬೆಲೆಯ ಅವಶ್ಯ ಪದಾರ್ಥಗಳು ಭಾರಿ ಅಕ್ರಮ ದಾಸ್ತಾನನ್ನು ಗುಜರಾತಿನ ಅಧಿಕಾರಿಗಳು ಫೆಬ್ರವರಿ 15 ರಿಂದ ಮಾರ್ಚ್ 23 ರವರೆಗೆ ನಡೆಸಿದ 5000 ಧಾಳಿಗಳಲ್ಲಿ ಪತ್ತೆ ಮಾಡಿ ವಶಪಡಿಸಿಕೊಂಡರೆಂದು ಗೌರ್ನರ್ ಶ್ರೀ ವಿಶ್ವನಾಥನ್ ರವರು ಪೌರರ ಸಮಿತಿಯಲ್ಲಿ ಹೇಳಿದರು

★

### 10 ರೂ ಗೆ 10000 ರೂ.

ಚಂಡೀಘರ— ಮ್ಯೂಚುಯಲ್ ಬೆನಿಫಿಟ್ ಸ್ಕೀಂನ ಡೈರೆಕ್ಟರ್ ಜನರಲ್ ಎಂದು ಸಂಬೋಧಿಸಿಕೊಂಡಿದ್ದ ಗೋಪಿಸಿಂಗ್ ನನ್ನು ಪೋಲೀಸರು ಬಂಧಿಸಿದರು ರೂ 10 ಬಂಡನಾಳ ಹಾಕಿ ರೂ 10000 ಪಡೆಯಬಹುದೆಂಬ ಪೈಸಿಂಗ್ ಸನ್ ಮ್ಯೂಚಿಯಲ್ ಬೆನಿಫಿಟ್ ಸ್ಕೀಂ ಹರಡುತ್ತಾ, ತನ್ನ ಸ್ಕೀಂನಿಂದ ಬಡತನ ನಿರ್ಮೂಲ ಮತ್ತು ಸಮಾಜ ಶುಧಾರಣೆಯಾಗುವುದೆಂದು ಪ್ರಚಾರ ಮಾಡುತ್ತಿದ್ದ; ಅವನಲ್ಲಿದ್ದ ರೂ. 1 45 ಲಕ್ಷ ಬೆಲೆಯ ಪದಾರ್ಥಗಳನ್ನು ವಶಪಡಿಸಿಕೊಳ್ಳಲಾಯಿತು.

### ಇಡ್ಲಿಯ ಮೇಲ್ಕೆ !

ಪೂನಾ— ಪಕ್ಷಿಣ ಭಾರತದ ಸೊಗಸಿನ ಇಡ್ಲಿ ಮಕ್ಕಳಿಗೆ ಪ್ರೋಟೀನ್ ಒದಗಿಸುವದೆಂದು ಅದರ ಬಗ್ಗೆ ಮೆಚ್ಚಿಗೆಯನ್ನು ನಿಪುಣ ಡಾ|| ಸುಖಾತ್ಮೆ ಹೇಳಿರುವರು.

### ಅಧಿಕಾರಿಗಳ ಸಸ್ಪೆಂಡ್

ಬೆಂಗಳೂರು— ರಸಾಯನಿಕ ಗೊಬ್ಬರ ಹಂಚಿಕೆ ಸಂಬಂಧದಲ್ಲಿ ಪೋಷಪ ಆರೋಪ ನಿಗಾಗಿ 6 ಅಧಿಕಾರಿಗಳನ್ನು ಸಸ್ಪೆಂಡು ಮಾಡಲಾಗಿದೆಯೆಂದು ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

### ಆಟೋರಿಕ್ಷಾಚಾಲಕನ ದಾಸ್ಯಕ್ಕೆ

ಮೈಸೂರು— ಪೊಲೀಸಗಣಕೋತ್ಸವದಲ್ಲಿ ಒಬ್ಬ ಆಟೋರಿಕ್ಷಾದವನ ಡೆಲ್ಲಿಯ ರಾಜಕೇಸಿಂಗ್ ಎಂಬುವನನ್ನು ಮುರಿಕ್ಕೆ ಕಟ್ಟಿ ಅತನಲ್ಲಿದ್ದ ರೂ 400 ಮತ್ತು ಚಿನ್ನವನ್ನು ಸಂಗ್ರಹಿಸಿರುವುದಾಗಿ ವರದಿಯಾಗಿದೆ

★

### ತಂಡೋಪತಂದ ಉಪವಾಸ

ಪಾಟ್ನಾ— ಬೆಲೆ ಏರಿಕೆ ಆಹಾರ ಕೊರತೆ, ವಿದ್ಯಾಭ್ಯಾಸದಲ್ಲಿ ಅವ್ಯವಸ್ಥೆ ಬದಲಾವಣೆ, ಭ್ರಷ್ಟಾಚಾರ ನಿರ್ಮೂಲನೆ, ಉದ್ಯೋಗ ಸೌಲಭ್ಯ ಮತ್ತಿತರ ತಮ್ಮ ಕೇಳಿಕೆ ನೆರವೇರುವದಕ್ಕಾಗಿ ವಿದ್ಯಾರ್ಥಿ ಸಮಿತಿ ವಿದ್ಯಾರ್ಥಿಗಳ ತಂಡತಂಡ 12 ಗಂಟೆ ಉಪವಾಸವನ್ನು ರಾಜ್ಯಾದ್ಯಂತ ಸ್ವಾರಂಭಿಸುವುದಾಗಿ ಪ್ರಕಟಿಸಿದೆ

★

### ಪ್ರಧಾನಿಯರಿಗೆ ಕಪ್ಪು ಬಾವುಟ ಪ್ರದರ್ಶನ

ಬೊಂಬಾಯಿ— ತಾ 16 ರಂದು ಪ್ರಧಾನಿ ಇಂದಿರಾರವರು ಪೂನಾದಲ್ಲಿ ವಿವಾಸ ನಿಲ್ದಾಣದಿಂದ ವಿಶ್ವವಿದ್ಯಾನಿಲಯಕ್ಕೆ ಹೋಗುವ 12 ಮೈಲಿ ಮಾರ್ಗದ ಉದ್ದಕ್ಕೂ ಸಮೂಹಿಕ ಕಪ್ಪು ಬಾವುಟ ಪ್ರದರ್ಶನ ನಡೆಸುವುದಾಗಿ ಮೇಯರ್ ಶ್ರೀ ದಿನಕರ್ ಹೇಳಿದರು ; ಪ್ರದರ್ಶನ ಶಾಂತಿಯುತವಾಗಿರುವದೆಂದೂ, ಆದರೆ ಕಾಂಗ್ರೆಸ್ಸಿಗರು ಗಲಾಟೆಗೆ ಕಾರಣರಾದಾರೆಂದೂ ಎಚ್ಚರಿಸಿರುವರು.

★

### ಅಂಚೆ ತಂತಿ ದರಗಳು

ನವದೆಹಲಿ— ಬಡ್ಜೆಟ್‌ನಲ್ಲಿ ಸೂಚಿಸಿರುವ ಅಂಚೆ ತಂತಿ ದರ ಏರಿಕೆಯು ಜೂನ್ ತಿಂಗಳಿನಿಂದ ಜಾರಿಗೆ ಬರುವದೆಂದೂ, ಈಗಿನ ದರಗಳು ಅಲ್ಲವೆಂದೂ ತಿಳಿಸಲಾಗಿದೆ

★

### ಅಧಿಕಾರಿಗಳಿಂದ ಅಕ್ರಮ ಸಾಗಾಣಿಕೆ ಪತ್ತೆ

ಕಾರವಾರ— ಅಕ್ರಮ ಸಾಗಾಣಿಕೆ ಪತ್ತೆ ಮಾಡಲು ನೇಮಿಸಲಾಗಿದ್ದ ಅಧಿಕಾರಿಗಳು 1400 ಗೋವಾ ಪೆನ್ನಿ ಸಾರಾಯಿಯನ್ನು ಸಜ್ಜಾಪುರದ ಯಂತ್ರಶಿಕ್ಷಣಿಯಲ್ಲಿ ಕಾರಖಾನೆಗೆ ಅಕ್ರಮವಾಗಿ ಸಾಗಿಸುತ್ತಿದ್ದಾಗ ಉನ್ನತ ಅಧಿಕಾರಿಗಳ ಹಿಡಿಯಲ್ಪಟ್ಟರು.

●

### ಗಣಿತ ಪರೀಕ್ಷೆಯ ನೆರವು ಕೇಳಿಕೆ

ಬೆಳ್ತಂಗಡಿ ಏಪ್ರಿಲ್ 10 ರಿಂದ ಶಿಕ್ಷಕರ ಮುಷ್ಕರದ ಬೆದರಿಕೆ ಇರುವದರಿಂದ ದಕ್ಷಿಣ-ಪೂರ್ವ ರೈಲ್ವೆಯವರು ಆ ಕಾಲದಲ್ಲಿ ಸಹಾಯಕ್ಕೆ ರಕ್ಷಣ ಸಚಿವಾಲಯವನ್ನು ಕೇಳಿರುವರು.

★

### ಪರೀಕ್ಷೆಯಲ್ಲಿ ಉತ್ತರ ಪುಸ್ತಕಗಳು

ನಿಡುಬೋಲು— ಆಂಧ್ರದೇಶದ ಈ ಊರಿನಲ್ಲಿ ಬಹಿರಂಗ ಪರೀಕ್ಷೆಯಲ್ಲಿ 35 ವಿದ್ಯಾರ್ಥಿಗಳು ತಮ್ಮ ಹಿಂದಿ ಪರೀಕ್ಷೆಯ ಉತ್ತರ ಪುಸ್ತಕಗಳನ್ನು ಖಾಲಿಯಾಗಿ ವಾಪಸ್ಸು ಮಾಡಿ, ಅದರ ಜೊತೆಯಲ್ಲಿ— ನಮ್ಮ ಸ್ಕೂಲಿನಲ್ಲಿ ಹಿಂದಿ ಪಂಡಿತರಿಲ್ಲವೆಂದೂ, ನಮಗೆ ಹಿಂದಿ ಕಲಿಸಿಲ್ಲವೆಂದೂ ಬರೆದಿಟ್ಟರು.

★

### ಸ್ವಾಮಿಗೆ ಅದಾಯ

ತಿರುಪತಿ— ಶ್ರೀ ವೆಂಕಟೇಶ್ವರಸ್ವಾಮಿಗೆ ಹುಂಡಿಯಲ್ಲಿ ಶನಿವಾರ ಒಂದೇ ಭಕ್ತರು ರೂ. 1 6 ಲಕ್ಷದ ನೂರು ರೂಪಾಯಿಗಳ ಕಟ್ಟನ್ನು ಹಾಕಿದ್ದರು ; ಆ ದಿವಸ ಹುಂಡಿಯಲ್ಲಿ ಒಟ್ಟು ರೂ 2.7 ಲಕ್ಷ ಇತ್ತು

### ಕರ್ನಾಟಕಕ್ಕೆ ಕೇರಳದ ವಿದ್ಯುಚ್ಛಕ್ತಿ

ತಿರುವೇಂದ್ರಂ– ಕೇರಳವು ಕರ್ನಾಟಕಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಸಂಭವವಿರುವದೆಂದು ಗೊತ್ತಾಗಿದೆ.

### ಭಾರತಕ್ಕೆ ಇರಾಕಿನ ಸಹಾಯ

ನವದೆಹಲಿ— 1974 ರಲ್ಲಿ ಭಾರತವು ಇರಾಕಿ ಕಚ್ಚಾ ಎಣ್ಣೆ ಕೊಳ್ಳುವ ಬಗ್ಗೆ 110 ಮಿಲಿಯ ಡಾಲರುಗಳ ವಸ್ತುಗೆ ಅನುಕೂಲಿಸುವ ಸಾಲದ ಒಪ್ಪಂದಕ್ಕೆ ರುಜು ಮಾಡಿತು.

### ಟಿಡಿ ಕರಡಿ ( ಟೆಡಿ ಬೇರ್ ) ಗೆ ಎಪ್ಪತ್ತು ವರ್ಷ

ಗೀಂಗೆನ್ ( ಜರ್ಮನಿ )— ಮಕ್ಕಳ ಪ್ರೀತಿಯ ಟೆಡಿ ಬೇರ್ ಬೊಮ್ಮೆ ಯು ಜನಿಸಿ ಇಂದಿಗೆ 70 ವರ್ಷಗಳಾದವು ; ಇದನ್ನು 1904 ರಲ್ಲಿ ಪಶ್ಚಿಮ ಜರ್ಮನಿಯ ಬೆಡನ್ ಪೂರ್ಟೆಂಬರ್ಗ್ ಪ್ರಾಂತ್ಯದ ಗೀಂಗನ್ ಎಂಬ ಗ್ರಾಮದಲ್ಲಿ ಅಂಗವಿಹೀನಳಾದ ದರ್ಜಿಯೊಬ್ಬಳು ನೋವಲು ತಯಾರಿಸಿದಳು ಇವಳು ಮಕ್ಕಳಿಗಾಗಿ ಆಟದ ಆನೆಗಳನ್ನು ತಯಾರಿಸುವುದರಲ್ಲಿ ಪ್ರವೀಣೆಯಾಗಿದ್ದಳು ಮಾರ್ಗರೆಟ್ ಸ್ಟೀನ್ ಎಂಬ ಈ ದರ್ಜಿಯು ತನ್ನ ಆಟದ ವಸ್ತುಗಳಿಗೆ ಬೇಡಿಕೆ ಹೆಚ್ಚಿದಂತೆ ಕರಡಿ ಬೊಮ್ಮೆಯೊಂದನ್ನು ಮಾಡಿ ಲಿಪ್ಸಿಗ್ಸ್ ಜಟ್ಟಣದ ಸಂತೆಯಲ್ಲಿ ಪ್ರದರ್ಶಿಸಿದಳು ; ಅದನ್ನು ಅಮೇರಿಕಾ ವ್ಯಾಪಾರಿಯೊಬ್ಬ ನೋಡಿ ಅಲ್ಲಿಯೇ 300 ಬೊಮ್ಮೆಯ ಪ್ರತಿಗಳಿಗೆ ಬೇಡಿಕೆಯನ್ನು ನೀಡಿದ. ಆವಾಗ ಅಮೆರಿಕಾ ಅಧ್ಯಕ್ಷರಾದ ಥಿಯೊಡಾರ್ ರೂಸ್ವೆಲ್ಟ್ ಬೇಟೆಯಲ್ಲಿ ಮರಿಗಳೊಡನಿದ್ದ ಕರಡಿಯನ್ನು ಕೊಲ್ಲಲು ನಿರಾಕರಿಸಿದರೆಂಬ ವದಂತಿ ಇತ್ತು. ಇದನ್ನು ಮೆಚ್ಚಿದ ಅವರ ಅನುಯಾಯಿಗಳು ಈ ಬೊಮ್ಮೆಯ ಹಲವು ಪ್ರತಿಗಳನ್ನು ಅವರಿಗೆ ಕೃತಜ್ಞತಾಪೂರ್ವಕವಾಗಿ ಕಳಿಸಿದರು. ಅಂದಿನಿಂದ ಅವರ ಮೆಚ್ಚಿನ ಹೆಸರಾದ ಟೆಡ್ಡಿಯನ್ನು ಸೇರಿಸಿ, ಟೆಡ್ಡಿ ಎಂದು ಖ್ಯಾತಿಗೊಂಡ ಈ ಬೊಮ್ಮೆ ಇಂದಿಗೆ ಎಪ್ಪತ್ತು ವರ್ಷಗಳಿಂದ ಮಕ್ಕಳನ್ನು ನಲಿಸುತ್ತಿದೆ ( ಯೂ ಪಿ ಎಸ್ )


# ವುಡ್‌ಲಾಂಡ್ಸ್ 29 3 74 ರಿಂದ

## ಅವೋಘ ಆರಂಭ

## ರಿ ಕ್ ಷಾ ವಾ ಲಾ

ಹಿಂದಿ ಕಲರ್ ಮಹೋನ್ನತ ಚಿತ್ರ ಸಂಗೀತ : ಎಸ್. ಡಿ. ಬರ್ಮನ್

ಪಾತ್ರ – ರಣಧೀರ್ ಕಪೂರ್ ನೀತು ಸಿಂಗ್ ಪ್ರಾಣ್ ಮಾಲಾಸಿನ್ಹ

ದಿನ 3 ಪ್ರದರ್ಶನಗಳು

## ಅಪೆರಾ 2 ನೇ ವಾರ

## ಜೀನಸ್

ಯೂನಿವರ್ಸಲ್ ಪಿಕ್ಚರ್ಸ್‌ರವರ ಈಸ್ಟ್‌ಮನ್ ಕಲರ್ ತಮಿಳು ಚಿತ್ರ

ಪಾತ್ರ — ಜೆಮಿನಿ ಗಣೇಶ್ ಸುಂದರರಾಜ್ ನಿರ್ಮಲ ನಂಬಿಯಾರ್

ದಿನ 3 ಪ್ರದರ್ಶನಗಳು

# SHAKTI

# SUDHA

A Superb Tonic

## Contribute Liberally

## to the National Defence Fund

Quality Printing Neat Binding

## Lakshminarasimha Press

Sivarampet, Mysore 1

## ಭಾರತದಲಿ ಗೋವಧೆ



## ಪೂರ್ಣ ನಿಶೇಧವಾಗಲಿ

## Protect the Cow

## Help The Gorakshana

— Humanitarian Propaganda Monthly —


Edited Printed and Published by Dharmaprachara Rata M S Krishna Rao Proprietor at the Satyavadi Press, Chamaraja puram Mysore